# ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲೂಕು ಮತ್ತು ಜಿಲ್ಲೆ

## ಸೇತುಬಂಧ ನೈದಾನಿಕ ಪರೀಕ್ಷೆ – 10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ – 1. ಶಿಕ್ಷಕರು ಹೇಳಿದ ವಾಕ್ಯಗಳ ಉಕ್ತಲೇಖನ ಬರೆಯುವುದು.**

**ಸಾಮರ್ಥ್ಯ – 2. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

"ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ. ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚುಕಾಲ ಬಾಳಬೇಕೆಂಬುದೇ ನನ್ನಾಸೆ. ನಾನು ಹೆಚ್ಚುಕಾಲ ಬಾಳುವುದಿಲ್ಲ" ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ಮಾಸ್ಕೋದಲ್ಲಿ ನೀಡಿದ ಬೀಳ್ಕೊಡುಗೆ ಸಮಾರಂಭದಲ್ಲಿ ಹೀಗೆ ಹೇಳಿದರು. ಅಷ್ಟೇ ಅಲ್ಲ "ಅಶೋಕನು ಕಳಿಂಗ ಯುದ್ಧದ ಅನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ" ಎಂದು ತಮ್ಮ ಪ್ರಥಮ ಭೇಟಿಯಲ್ಲಿ ರಾಧಾಕೃಷ್ಣನ್ ಹೇಳಿದ ಮಾತುಗಳನ್ನು ಸ್ಮರಿಸಿಕೊಂಡರು. ರಾಧಾಕೃಷ್ಣನ್ ವಿದ್ವತ್ ತಪದ ಫಲವಾಗಿ ಯುಗದ ಪರಿವರ್ತನಶೀಲ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರೆನಿಸಿದರು. ರಾಧಾಕೃಷನ್ ಅವರು ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಗಡಿಯಲ್ಲಿರುವ ತಿರುತ್ತಣಿ ಎಂಬ ಪುಟ್ಟಗ್ರಾಮದಲ್ಲಿ ಕ್ರಿ. ಶ. 1888 ಸೆಪ್ಟೆಂಬರ್ 5 ರಂದು ಜನಿಸಿದರು. ರಂದೆ ವೀರಸ್ವಾಮಿ, ತಾಯಿ ಸೀತಮ್ಮ. ಅವರ ಮುತ್ತಜ್ಜ ವೀರಸ್ವಾಮಿ ಆಂಧ್ರದ ಸರ್ವೇಪಲ್ಲಿಯಿಂದ ತಮಿಳುನಾಡಿನ ತಿರುತ್ತಣಿಗೆ ಬಂದು ನೆಲೆಸಿದರು.

**ಪ್ರಶ್ನೆಗಳು:**

1. ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ಮಾಸ್ಕೋದಲ್ಲಿ ನೀಡಿದ ಬೀಳ್ಕೊಡುಗೆ ಸಮಾರಂಭದಲ್ಲಿ ಏನೆಂದು ಹೇಳಿದರು?

2. ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ತಮ್ಮ ಪ್ರಥಮ ಭೇಟಿಯಲ್ಲಿ ರಾಧಾಕೃಷ್ಣನ್ ಹೇಳಿದ ಮಾತುಗಳನ್ನು ಯಾವ ಮಾತುಗಳನ್ನು ಸ್ಮರಿಸಿಕೊಂಡರು?

3. ರಾಧಾಕೃಷ್ಣನ್ ಅವರು ಎಲ್ಲಿ ಮತ್ತು ಯಾವಾಗ ಜನಿಸಿದರು?

4. ರಾಧಾಕೃಷ್ಣನ್ ಅವರ ತಂದೆ ಮತ್ತು ತಾಯಿ ಹೆಸರೇನು?

**ಸಾಮರ್ಥ್ಯ – 3. ಕೆಳಗಿನ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಸಂಕಲ್ಪಹಿಂಸೆಯೊಂದರೊ
ಳಾಂ ಕಂಡೆಂ ಭವದ ದುಃಖಮುಂಡೆಂ ನೀನ್ ನಿಃ
ಶಂಕತೆಯಿನಿನಿತು ದೇಹಿಗ
ಗಳಂ ಕೊಂದಪೆ ನರಕದೊಳ್ ನಿವಾರಣೆವಡೆವಯ್

**ಸಾಮರ್ಥ್ಯ – 4.**

**ಕೊಟ್ಟಿರುವ ಪ್ರತಿ ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೂ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1. 'ಯಜಮಾನ' ಪದದಲ್ಲಿರುವ ಅವರ್ಗೀಯ ವ್ಯಂಜನಾಕ್ಷರವಿದು:
   (ಎ) ಯ (ಬಿ) ಜ (ಸಿ) ಮಾ (ಡಿ) ನ

| | |
|---|---|
| **ಉತ್ತರ** | |

2. ಅಕರ್ಮಕ ಧಾತುವಿಗೆ ಉದಾಹರಣೆಯಿದು:
   (ಎ) ನೆಡು (ಬಿ) ಬದುಕು (ಸಿ) ಕಟ್ಟು (ಡಿ) ಓದು

| | |
|---|---|
| **ಉತ್ತರ** | |

3. 'ಓದಲಿ' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆ:
   (ಎ) ನಿಷೇಧಾರ್ಥಕ (ಬಿ) ಪ್ರಶ್ನಾರ್ಥಕ (ಸಿ) ಸಂಭಾವನಾರ್ಥಕ (ಡಿ) ವಿಧ್ಯರ್ಥಕ

| | |
|---|---|
| **ಉತ್ತರ** | |

4. 'ಭರತಕ್ಷೇತ್ರದೊಳ್' ಪದದಲ್ಲಿರುವ ವಿಭಕ್ತಿಯ ಹೆಸರು:
   (ಎ) ಪ್ರಥಮ (ಬಿ) ಪಂಚಮೀ (ಸಿ) ಷಷ್ಠೀ (ಡಿ) ಸಪ್ತಮೀ

| | |
|---|---|
| **ಉತ್ತರ** | |

5. 'ಚಂದ್ರೋದಯ' ಪದದಲ್ಲಿ ಏರ್ಪಟ್ಟಿರುವ ಸಂಧಿ:
   (ಎ) ಸವರ್ಣದೀರ್ಘ (ಬಿ) ಗುಣ (ಸಿ) ವೃದ್ಧಿ (ಡಿ) ಯಣ್

| | |
|---|---|
| **ಉತ್ತರ** | |

6. 'ಗಿಡಮರಬಳ್ಳಿಗಳು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:
   (ಎ) ತತ್ಪುರುಷ (ಬಿ) ಕರ್ಮಧಾರಯ (ಸಿ) ಅಂಶಿ (ಡಿ) ದ್ವಂದ್ವ

| | |
|---|---|
| **ಉತ್ತರ** | |

7. 'ಸೀತೆಯ ಮುಖಕಮಲ ಅರಳಿತು' ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ಉಪಮಾ (ಬಿ) ರೂಪಕ (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

| | |
|---|---|
| **ಉತ್ತರ** | |

8. 'ಷಟ್ಪದಿ' ಪದ್ಯದಲ್ಲಿ ಇರುವ ಪಾದಗಳ ಸಂಖ್ಯೆ;
   (ಎ) ಮೂರು (ಬಿ) ನಾಲ್ಕು (ಸಿ) ಆರು (ಡಿ) ಎಂಟು

| | |
|---|---|
| **ಉತ್ತರ** | |

9. 'ಅವನು ಶಾಲೆಗೆ ಹೋಗುತ್ತಾನೆ' ವಾಕ್ಯವು ಈ ಕಾಲರೂಪದಲ್ಲಿದೆ:
   (ಎ) ಭೂತಕಾಲ (ಬಿ) ವರ್ತಮಾನಕಾಲ (ಸಿ) ಭವಿಷ್ಯತ್‌ಕಾಲ (ಡಿ) ಭೂತನ್ಯೂನಕಾಲ

| | |
|---|---|
| **ಉತ್ತರ** | |

10. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು:
   (ಎ) ಗೊತ್ತಿಲ್ಲ (ಬಿ) ಪಾಠವನ್ನು (ಸಿ) ಶಾಲೆಯಲ್ಲಿ (ಡಿ) ಮಳೆಗಾಲ

| | |
|---|---|
| **ಉತ್ತರ** | |